KAHS410041712025

Presented on : 18-12-2025
Registered on : 18-12-2025
Decided on : 07-04-2026
Duration : 3 months, 20 days

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅರಸೀಕೆರೆ**

**:: ಉಪಸ್ಥಿತರು ::**

ಶ್ರೀ ಪುರುಷೋತ್ತಮ ಟಿ.ಪಿ. ಬಿ.ಎ., ಎಲ್.ಎಲ್.ಬಿ.,
**ಸಿ/ಸಿ 2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಅರಸೀಕೆರೆ.**

**ದಿನಾಂಕ 07ನೇ ಏಪ್ರಿಲ್ 2026**

**ಅಸಲು ದಾವಾ ಸಂಖ್ಯೆ 844/2025**

**ವಾದಿ** : ಮಾಸ್ಟರ್ ಆರ್.ಕೆ.ಜಿ.ಎಂ.ಎಂ
ಮಹಾಸ್ವಾಮಿಯವರು
ಬಿನ್ ಲೇಟ್ ಆರ್.ಕೆ.ಗಂಗಣ್ಣ,
ವಯಸ್ಸು ಸುಮಾರು 56 ವರ್ಷಗಳು,
ವಕೀಲರು, ಬಿ.ಎ., ಎಲ್.ಎಲ್.ಬಿ.,
ವಾಸಃ ಕೋತಿ ತೋಪಿನ ಹತ್ತಿರ,
ಎನ್.ಆರ್.ಕಾಲೋನಿ, ತುಮಕೂರು.

**( ಪರವಾಗಿ ಮಾಸ್ಟರ್ ಆರ್.ಕೆ.ಜಿ.ಎಂ.ಎಂ. ಮಹಾಸ್ವಾಮಿ, ವಕೀಲರು )**

**:: ವಿರುದ್ಧ ::**

**ಪ್ರತಿವಾದಿ** : ಲೋಕೇಶ್ ಜೆ.
ಬಿನ್ ಲೇಟ್ ಜೈಸಿದ್ದಪ್ಪ,
ವಯಸ್ಸು ಸುಮಾರು 43 ವರ್ಷಗಳು,
ವಾಸಃ ಗಾಂಧಿನಗರ, ಜಾವಗಲ್ ಗ್ರಾಮ,
ಜಾವಗಲ್ ಹೋಬಳಿ ಮತ್ತು ಅಂಚೆ,
ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

**( ಪರವಾಗಿ ಶ್ರೀ ಪಿ.ಜಿ.ಕೆ., ವಕೀಲರು )**

**:: ಆದೇಶ ::**

ಪ್ರಸ್ತುತ ರಾಜೀ ಅರ್ಜಿಯನ್ನು ವಾದಿ ಮತ್ತು ಪ್ರತಿವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 3ರಡಿಯಲ್ಲಿ ಸಲ್ಲಿಸಿರುತ್ತಾರೆ.

**2. ರಾಜೀ ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ :**

ಪ್ರಸ್ತುತ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಯು ತಮ್ಮ ರಾಜೀ ಅರ್ಜಿಯಲ್ಲಿ ತಿಳಿಸಿರುವುದೇನೆಂದರೆ ದಿನಾಂಕ 23.10.2025 ರಲ್ಲಿ ದಾವಾ ತಪಸೀಲು ಪಟ್ಟಿಯಲ್ಲಿರುವ ಚಕ್ಕುಬಂಧಿಯ ಮಧ್ಯದಲ್ಲಿರುವ ಖಾಲಿ ಸೈಟ್ ಅಂದರೆ ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಯು ತನ್ನ ಸ್ವ-ಸಂಪಾದನೆಯಿಂದ ಗಂಗಾಧರ್ ಜೆ.ಕೆ. ಬಿನ್ ಲೇಟ್ ಜೆ.ಹೆಚ್.ಕಾಡಸಿದ್ದಪ್ಪರವರಿಂದ ಶುದ್ಧ ನೊಂದಣಿ ಕ್ರಯ ಪತ್ರದ ಮುಖೇನ ದಿನಾಂಕ 11.10.2025 ರಂದು ಕ್ರಯಕ್ಕೆ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಕ್ರಯ ನೀಡಿದ ಗಂಗಾಧರ್ ಜೆ.ಕೆ. ಇವರಿಗೆ ಸದರಿ ದಾವಾ ಷೆಡ್ಯೂಲ್ ಸ್ವತ್ತು ಜಾವಗಲ್ ಗ್ರೂಪ್ ಪಂಚಾಯ್ತಿ ಆಫೀಸಿನಿಂದ ಕೊಡಲ್ಪಟ್ಟಿರುತ್ತದೆಂದು ತಿಳಿಸಿರುತ್ತಾರೆ.

3. ಪ್ರತಿವಾದಿಯು ನಿರೂಪಾದಿಕ ಮಾಲೀಕರಾದ ದಾವ ತಪಸೀಲು ಪಟ್ಟಿಯ ಚಕ್ಕುಬಂಧಿಯ ಮಧ್ಯದಲ್ಲಿ ಇರುವ ಖಾಲಿ ಸೈಟನ್ನು ವಾದಿಯ ಹೆಸರಿಗೆ ಶುದ್ಧ ಕ್ರಯ ಪತ್ರವನ್ನು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿಕೊಡಲು ಮಾರಾಟದ ಒಟ್ಟು ಮೌಲ್ಯ ರೂ.95,000/- ಗಳನ್ನು ಮತ್ತು ಕ್ರಯದ ಕರಾರು ಪತ್ರ ಬರೆದು ಕೊಡುವ ಸಮಯದಲ್ಲಿ ಮಾರುಕಟ್ಟೆ ಮೌಲ್ಯ ಹೆಚ್ಚಿರಲಿ ಅಥವಾ ಕಡಿಮೆ ಇರಲಿ ಅಥವಾ ಶುದ್ಧ ಕ್ರಯಪತ್ರವನ್ನು ನೋಂದಣಿ ಮಾಡುವ ಸಮಯದಲ್ಲಿ ಮಾರುಕಟ್ಟೆ ಮೌಲ್ಯ ಹೆಚ್ಚಿರಲಿ ಅಥವಾ ಕಡಿಮೆ ಇರಲಿ, ಮಾರಾಟದ ಮೌಲ್ಯ ಮಾತ್ರ ಮೇಲ್ಕಂಡಂತೆ ರೂ.95,000/- ಗಳೆಂದು ಆತ್ಮಸಂತೋಷದಿಂದ ಒಪ್ಪಿ ಮುಂಗಡ ಹಣವಾಗಿ ಒಟ್ಟು ರೂ.80,000/- ಗಳನ್ನು ಪಡೆದಿದ್ದು, ಬಾಕಿ ರೂ.15,000/- ಗಳು ಮಾತ್ರ ಉಳಿದಿರುತ್ತದೆ ಎಂದು ಇ-ಸ್ಟಾಂಪ್ ಪೇಪರ್ ನಲ್ಲಿ ಸಾಕ್ಷಿಗಳ ಸಮಕ್ಷಮ ಮಾರಾಟಗಾರರಾದ ಪ್ರತಿವಾದಿ ಸಹಿ ಮಾಡಿರುತ್ತಾರೆಂದು, ನಂತರ ತನ್ನ ಹೆಸರಿಗೆ ಪ್ರತಿವಾದಿ ದಾವಾ ಆಸ್ತಿ ಅಂದರೆ ಖಾಲಿ ಸೈಟನ್ನು ತುರ್ತಾಗಿ ಇ-ಸ್ವತ್ತು ಮಾಡಿಸಿಕೊಂಡು ಶುದ್ಧ ಕ್ರಯಪತ್ರವನ್ನು ವಾದಿಯ ಹೆಸರಿಗೆ ರಿಜಿಸ್ಟರ್ ಮಾಡಿ ಕೊಡುವಲ್ಲಿ ವಿಳಂಬ

ಮಾಡಿದ್ದು, ಈಗ ಪರಸ್ಪರ ಮಾಡುಕತೆಯ ಮೂಲಕ ಮೇಲ್ಕಂಡ ದಾವೆಯನ್ನು ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಆತ್ಮ ಸಂತೋಷದಿಂದ ಒಪ್ಪಿರುವುದಾಗಿ, ಈ ರಾಜೀ ಅರ್ಜಿಯ ಮುಖೇನ ವಾದಿ ಮತ್ತು ಪ್ರತಿವಾದಿಯು ತಿಳಿಸಿರುತ್ತಾರೆ. ಹಾಗಾಗಿ ಮೇಲೆ ತಿಳಿಸಿದ ಎಲ್ಲಾ ಅಂಶಗಳು ಸತ್ಯವಾಗಿದ್ದು, ಈ ದಿನ ಶುದ್ಧ ಕ್ರಯಪತ್ರ ಬಾಕಿ ಉಳಿದ ರೂ.15,000/- (ಹದಿನೈದು ಸಾವಿರ ರೂಪಾಯಿ) ಗಳನ್ನು ನಗದಾಗಿ ಪಡೆದುಕೊಂಡಿದ್ದು ಶುದ್ಧ ಕ್ರಯಪತ್ರದ ಬಾಕಿ ಮೊತ್ತವೇನು ಇರುವುದಿಲ್ಲ ಎಲ್ಲಾ ಹಣ ಪಾವತಿಯಾಗಿರುತ್ತದೆಂದು, ಆದಕಾರಣ ಪ್ರತಿವಾದಿ 15 ದಿನಗಳ ಒಳಗಾಗಿ ಆತನ ಹೆಸರಿಗೆ ಇ-ಸ್ವತ್ತನ್ನು ಮಾಡಿಸಿಕೊಂಡು ವಾದಿಯ ಹೆಸರಿಗೆ ಶುದ್ಧ ಕ್ರಯಪತ್ರ ವನ್ನು ರಿಜಿಸ್ಟರ್ ಮಾಡಿಸಿಕೊಡುತ್ತೇನೆಂದು ತಿಳಿಸಿರುತ್ತಾರೆ. ಹಾಗಾಗಿ ಮೇಲ್ಕಂಡ ಈ ಎಲ್ಲಾ ಸಕಾರಣಗಳಿಂದ ವಾದಿ ತನ್ನ ವಾದ ಪತ್ರದ ಪಾರ್ಥನೆಯಲ್ಲಿ ಕೋರಿರುವಂತೆ ತೀರ್ಪು ಮತ್ತು ಡಿಕ್ರಿಯನ್ನು ವಾದಿಯ ಹೆಸರಿಗೆ ನೀಡುವುದು ನ್ಯಾಯ ಸಮಾನತೆ ಹಿತದೃಷ್ಟಿಯಿಂದ ಅವಶ್ಯಕವೆಂದು ವಾದಿ ಮತ್ತು ಪ್ರತಿವಾದಿ ತಮ್ಮ ರಾಜೀ ಅರ್ಜಿಯಲ್ಲಿ ತಿಳಿಸಿರುತ್ತಾರೆ.

4. ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತದೆ.

1. *ಪ್ರಸ್ತುತ ರಾಜೀ ಅರ್ಜಿಯನ್ನು ಅನುಮತಿಸಲು ವಾದಿ ಮತ್ತು ಪ್ರತಿವಾದಿಯು ಸಾಕಷ್ಟು ಆಧಾರಗಳನ್ನು ನೀಡಿದ್ದಾರೆ ಎಂಬುದನ್ನು ಸಾಬೀತುಪಡಿಸಿರುತ್ತಾರೆಯೇ?*

2. *ಏನು ಆದೇಶ?*

6. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ |
| ಅಂಶ-2 | : | ಅಂತಿಮ ಆದೇಶದಂತೆ, |

:: **ಕಾರಣಗಳು** ::

7. **ಅಂಶ-1 :** ವಾದಿ ಮತ್ತು ಪ್ರತಿವಾದಿಯು ಪ್ರಸ್ತುತ ರಾಜೀ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿಯು ನಿರೂಪಾದಿಕ ಮಾಲೀಕರಾದ ದಾವ ತಪಸೀಲು ಪಟ್ಟಿಯ ಚಕ್ಕುಬಂಧಿಯ ಮಧ್ಯದಲ್ಲಿ ಇರುವ ಖಾಲಿ ಸೈಟನ್ನು ವಾದಿಯ ಹೆಸರಿಗೆ ಶುದ್ಧ ಕ್ರಯ ಪತ್ರವನ್ನು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ರೂ.95,000/- ರೂಗಳಿಗೆ ನೋಂದಣಿ ಮಾಡಿಕೊಡಲು ಒಪ್ಪಿ, ಮುಂಗಡ ಹಣವಾಗಿ ಒಟ್ಟು ರೂ.80,000/- ಗಳನ್ನು ಪಡೆದಿದ್ದು, ಬಾಕಿ ರೂ.15,000/- ಗಳು ಮಾತ್ರ ಉಳಿದಿರುತ್ತದೆ ಎಂದು ಇ-ಸ್ಟಾಂಪ್ ಪೇಪರ್ ನಲ್ಲಿ ಸಾಕ್ಷಿಗಳ ಸಮಕ್ಷಮ ಮಾರಾಟಗಾರರಾದ ಪ್ರತಿವಾದಿ ಸಹಿ ಮಾಡಿರುತ್ತಾರೆಂದು, ನಂತರ ತನ್ನ ಹೆಸರಿಗೆ ಪ್ರತಿವಾದಿ ದಾವಾ ಆಸ್ತಿ ಅಂದರೆ ಖಾಲಿ ಸೈಟನ್ನು ತುರ್ತಾಗಿ ಇ-ಸ್ವತ್ತು ಮಾಡಿಸಿಕೊಂಡು ಶುದ್ಧ ಕ್ರಯಪತ್ರವನ್ನು ವಾದಿಯ ಹೆಸರಿಗೆ ರಿಜಿಸ್ಟರ್ ಮಾಡಿ ಕೊಡುವಲ್ಲಿ ವಿಳಂಬ ಮಾಡಿದ್ದು, ಈಗ ಪರಸ್ಪರ ಮಾಡುಕತೆಯ ಮೂಲಕ ಮೇಲ್ಕಂಡ ದಾವೆಯನ್ನು ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಆತ್ಮ ಸಂತೋಷದಿಂದ ಒಪ್ಪಿರುವುದಾಗಿ, ಈ ರಾಜೀ ಅರ್ಜಿಯ ಮುಖೇನ ವಾದಿ ಮತ್ತು ಪ್ರತಿವಾದಿಯು ತಿಳಿಸಿರುತ್ತಾರೆ. ಹಾಗಾಗಿ ಮೇಲೆ ತಿಳಿಸಿದ ಎಲ್ಲಾ ಅಂಶಗಳು ಸತ್ಯವಾಗಿದ್ದು, ಈ ದಿನ ಶುದ್ಧ ಕ್ರಯಪತ್ರ ಬಾಕಿ ಉಳಿದ ರೂ.15,000/- (ಹದಿನೈದು ಸಾವಿರ ರೂಪಾಯಿ) ಗಳನ್ನು ನಗದಾಗಿ ಪಡೆದುಕೊಂಡಿದ್ದು ಶುದ್ಧ ಕ್ರಯಪತ್ರದ ಬಾಕಿ ಮೊತ್ತವೇನು ಇರುವುದಿಲ್ಲ ಎಲ್ಲಾ ಹಣ ಪಾವತಿಯಾಗಿರುತ್ತದೆಂದು, ಆದಕಾರಣ ಪ್ರತಿವಾದಿ 15 ದಿನಗಳ ಒಳಗಾಗಿ ಆತನ ಹೆಸರಿಗೆ ಇ-ಸ್ವತ್ತನ್ನು ಮಾಡಿಸಿಕೊಂಡು ವಾದಿಯ ಹೆಸರಿಗೆ ಶುದ್ಧ ಕ್ರಯಪತ್ರ ವನ್ನು ರಿಜಿಸ್ಟರ್ ಮಾಡಿಸಿಕೊಡುತ್ತೇನೆಂದು ತಿಳಿಸಿರುತ್ತಾರೆ. ಹಾಗಾಗಿ ಮೇಲ್ಕಂಡ ಈ ಎಲ್ಲಾ ಸಕಾರಣಗಳಿಂದ ವಾದಿ ತನ್ನ ವಾದ ಪತ್ರದ ಪಾರ್ಥನೆಯಲ್ಲಿ ಕೋರಿರುವಂತೆ ತೀರ್ಪು ಮತ್ತು ಡಿಕ್ರಿಯನ್ನು ವಾದಿಯ ಹೆಸರಿಗೆ ನೀಡುವುದು ನ್ಯಾಯ ಸಮಾನತೆ ಹಿತದೃಷ್ಟಿಯಿಂದ ಅವಶ್ಯಕವೆಂದು ವಾದಿ ಮತ್ತು ಪ್ರತಿವಾದಿ ತಮ್ಮ ರಾಜೀ ಅರ್ಜಿಯಲ್ಲಿ ತಿಳಿಸಿರುತ್ತಾರೆ.

8. ಪ್ರಸ್ತುತ ರಾಜೀ ಅರ್ಜಿಯನ್ನು ದಿನಾಂಕ 04.03.2026 ರಂದು ಸಲ್ಲಿಸಿದ್ದು, ಇಂದಿಗೆ 31 ದಿನಗಳು ಕಳೆದಿದ್ದು, ಈ ಅರ್ಜಿಯಲ್ಲಿ ಹೇಳಿರುವಂತೆ 15 ದಿನದೊಳಗೆ ಪ್ರತಿವಾದಿ ತನ್ನ ಹೆಸರಿಗೆ ಇ-

ಸ್ವತ್ತನ್ನು ಮಾಡಿಸಿಕೊಂಡು ವಾದಿಯ ಹೆಸರಿಗೆ ಶುದ್ಧ ಕ್ರಯಪತ್ರವನ್ನು ನೊಂದಣಿ ಮಾಡಿಕೊಡುವುದಾಗಿ ಹೇಳಿದ್ದು, ಇಂದಿಗೂ ಪ್ರತಿವಾದಿಯು ತನ್ನ ಹೆಸರಿಗೆ ದಾವಾ ಸ್ವತ್ತನ್ನು ಇ-ಸ್ವತ್ತು ಮಾಡಿಕೊಂಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಯು ತಮ್ಮ ಅರ್ಜಿಯೊಂದಿಗೆ ಗ್ರಾಮಪಂಚಾಯ್ತಿ ಅಧಿಕಾರಿಗಳು ನೀಡಿರುವ ನಮೂನೆ-9 ದಾಖಲೆಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯು ದಾವಾ ಸ್ವತ್ತಿಗೆ ಸಂಬಂಧಿಸಿದ್ದು, ಈಗಲೂ ದಾವಾ ಸ್ವತ್ತು ಮೂಲ ಮಾಲೀಕರಾದ ಗಂಗಾಧರ ಜೆ.ಕೆ. ಬಿನ್ ಜೆ.ಹೆಚ್.ಕಾಡಸಿದ್ದಪ್ಪರವರ ಹೆಸರಿನಲ್ಲಿಯೇ ಇರುವುದು ಕಂಡುಬರುತ್ತದೆ. ಅದೇ ರೀತಿ ದಿನಾಂಕ 10.10.2025 ರ ಶುದ್ಧಕ್ರಯಪತ್ರವನ್ನು ಹಾಜರುಪಡಿಸಿದ್ದು, ಸದರಿ ದಾಖಲೆ ಪ್ರಕಾರ ಗಂಗಾಧರ ಜೆ.ಕೆ. ಬಿನ್ ಜೆ.ಹೆಚ್.ಕಾಡಸಿದ್ದಪ್ಪ, ರತ್ನಮ್ಮ ಕೋಂ ಗಂಗಾಧರ ಜೆ.ಕೆ., ಕೃಷ್ಣಕುಮಾರ್ ಜೆ.ಜಿ ಬಿನ್ ಗಂಗಾಧರ ಜೆ.ಕೆ., ಗುರುರಾಜ ಜೆ.ಜಿ ಬಿನ್ ಗಂಗಾಧರ ಜೆ.ಕೆ. ರವರು ಲೋಕೇಶ ಜೆ ಬಿನ್ ಲೇಟ್ ಜೈಸಿದ್ದಪ್ಪ (ಪ್ರತಿವಾದಿ) ರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿ ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯಪತ್ರದ ಪ್ರಕಾರ ದಾವಾ ಸ್ವತ್ತನ್ನು ಪ್ರತಿವಾದಿಯು ದಿನಾಂಕ 10.10.2025 ರಂದು ಖರೀದಿಸಿದ್ದರೂ ಸಹ, ಈಗಲೂ ಗ್ರಾಮಪಂಚಾಯ್ತಿಯ ನಮೂನೆ-9 ರ ದಾಖಲೆ ಮೂಲ ಮಾಲೀಕರ ಹೆಸರಿನಲ್ಲಿಯೇ ಇದ್ದು, ಕ್ರಯಪತ್ರದ ಮೇರೆಗೆ ಪ್ರತಿವಾದಿ ಹೆಸರಿಗೆ ನಮೂನೆ-9 ಅಥವಾ ಇ-ಸ್ವತ್ತು ದಾಖಲೆ ಬದಲಾವಣೆ ಆಗಿರುವುದಿಲ್ಲ. ಕ್ರಯಪತ್ರದಂತೆ ಪ್ರತಿವಾದಿಯ ಹೆಸರಿಗೆ ಇ-ಸ್ವತ್ತು ದಾಖಲೆ ವರ್ಗಾವಣೆ ಆಗುವ ಮೊದಲೇ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯ ಕರಾರು ಪತ್ರ ಬರೆದುಕೊಟ್ಟಿರುವುದು ಸ್ಪಷ್ಟವಾಗುತ್ತದೆ. ಆದಕಾರಣ ಇಂದಿಗೂ ಸಹ ಪ್ರತಿವಾದಿಯ ಹೆಸರಿಗೆ ದಿನಾಂಕ 11.10.2025 ರ ಕ್ರಯಪತ್ರದಂತೆ ಇ-ಸ್ವತ್ತು ದಾಖಲೆ ಬಂದಿರುವುದಿಲ್ಲ. ಆದ್ದರಿಂದ ತನ್ನ ಹೆಸರಿಗೆ ಇ-ಸ್ವತ್ತು ದಾಖಲೆ ಪಡೆಯದೇ ದಾವಾ ಸ್ವತ್ತಿನ ಹಕ್ಕು ಶೀರ್ಷಿಕೆಯು ಕಾನೂನುಬದ್ಧವಾಗಿ ಪ್ರಾಪ್ತವಾಗಿರುವುದಿಲ್ಲ. ಆದರೂ ಸಹ ಪ್ರತಿವಾದಿಯು ವಾದಿಯ ಹೆಸರಿಗೆ ನೊಂದಾಯಿತವಲ್ಲದ ಕರಾರುಪತ್ರವನ್ನು ಬರೆದುಕೊಟ್ಟು, ದಿನಾಂಕ 10.10.2025 ರಂತೆ ಪ್ರತಿವಾದಿಯ ಹೆಸರಿಗೆ ಇ-ಸ್ವತ್ತು ದಾಖಲೆ ಆಗದೇ, ರಾಜೀ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ತನಗೆ ಇನ್ನೂ ಹಕ್ಕು ಮತ್ತು ಶೀರ್ಷಿಕೆ ವರ್ಗಾವಣೆಯಾಗದ ದಾವಾ ಸ್ವತ್ತನ್ನು ಮುಂದೆ ತನ್ನ ಹೆಸರಿಗೆ ಇ-ಸ್ವತ್ತು ಖಾತೆ ಮಾಡಿಸಿಕೊಂಡು ವಾದಿಯ ಹೆಸರಿಗೆ ಶುದ್ಧಕ್ರಯಪತ್ರವನ್ನು ಬರೆದುಕೊಡುತ್ತೇನೆಂದು ಹೇಳಿರುವುದು ಕಾನೂನುಬದ್ಧವಾಗಿ

ಸಮಂಜಸವಾಗಿರುವುದಿಲ್ಲ. ಆದಕಾರಣ ಸದರಿ ಅರ್ಜಿಯು ಅಪಕ್ವತೆಯಿಂದ (premature) ಕೂಡಿದ್ದು, ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಪ್ರತಿವಾದಿಯು ತನ್ನ ಹೆಸರಿಗೆ ಇ-ಸ್ವತ್ತು (ಖಾತಾ) ಪಡೆದು ಹಕ್ಕು, ಶೀರ್ಷಿಕೆ ಪ್ರಾಪ್ತವಾದ ನಂತರ ಮತ್ತೊಮ್ಮೆ ರಾಜೀ ಅರ್ಜಿಯನ್ನು ಸಲ್ಲಿಸುವ ಅವಕಾಶ ಉಭಯ ಪಕ್ಷಗಾರರಿಗೂ ಪ್ರಾಪ್ತವಾಗುತ್ತದೆ. ಆದಕಾರಣ ಈ ಸಮಯದಲ್ಲಿ ರಾಜೀ ಅರ್ಜಿಯನ್ನು ಪರಿಗಣಿಸುವುದು ಕಾನೂನುಬದ್ಧವಾಗಿ ಸಮಂಜಸವಾಗಿರುವುದಿಲ್ಲ ಮತ್ತು ಪರಿಗಣಿಸಿದರೆ ಹಲವಾರು ದಾವೆಗಳು ಉದ್ಭವವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ಅಂಶ-1ನ್ನು **ನಕಾರಾತ್ಮಕವಾಗಿ** ಎಂದು ಉತ್ತರಿಸಲಾಗಿದೆ.

9. **ಅಂಶ-2 :** ಈ ಮೇಲೆ ವಿವರಿಸಿರುವ ಎಲ್ಲಾ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

**:: ಆದೇಶ ::**

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 3ರ ಅಡಿಯಲ್ಲಿ ವಾದಿ ಮತ್ತು ಪ್ರತಿವಾದಿಯು ಸಲ್ಲಿಸಿರುವ ರಾಜೀ ಅರ್ಜಿಯನ್ನು ವಜಾ ಮಾಡಲಾಗಿದೆ.

(ಶೀಘ್ರ ಲಿಪಿಗಾರರಿಗೆ ತೀರ್ಪನ್ನು ನೇರ ಗಣಕಯಂತ್ರದ ಮುಖೇನ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ತರ್ಜುಮೆ ಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 07ನೇ ಏಪ್ರಿಲ್ 2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**(ಶ್ರೀ ಪುರುಷೋತ್ತಮ ಟಿ.ಪಿ.)**
**ಸಿ/ಸಿ 2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ಅರಸೀಕೆರೆ.**